



ಆದರೆ ಈ ವಾದವನ್ನು ಸೆಲ್ಫೀಪ್ರಿಯರು ಒಪ್ಪುತ್ತಿಲ್ಲ. ಅವರ ವಾದ ಬೇರೆಯೇ ಇದೆ.
ತಮ್ಮತನವನ್ನು ಮೆರೆದುಕೊಳ್ಳುವ ಗುಣ ಮನುಷ್ಯನಲ್ಲಿರುವ ಮೂಲಭೂತ ಗುಣ. ಚೆನ್ನಾಗಿ ಕಾಣಬೇಕೆನ್ನುವ ಅಭಿಲಾಷೆ ಕೂಡ ಅಷ್ಟೇ ಹಳೆಯದು. ಹಾಗಾಗಿ ನಾರ್ಸಿಸಂ ಮನುಷ್ಯನ ಸಹಜ ಗುಣವೇ. ಅದಕ್ಕೆ ಸೆಲ್ಫೀಗಳು ಒಂದು ಬಗೆಯ ಅಭಿವ್ಯಕ್ತಿ ಮೂಲವಾಗಿವೆ. ಇದರಲ್ಲಿ ಕರಾಳತೆ ಎಲ್ಲಿಂದ ಬರುತ್ತದೆ' ಎನ್ನುವುದು ಇವರ ಪ್ರಶ್ನೆ.

## ಸೆಲ್ಫೀ ದುರಂತಗಳು

ಸೆಲ್ಫೀಗಳನ್ನು ತೆಗೆದುಕೊಳ್ಳುವ ಭರದಲ್ಲಿ ಅನೇಕ ಅನಾಹುತಗಳನ್ನು ಮಾಡಿಕೊಂಡಿರುವ ಜನರಿದ್ದಾರೆ. ಕಾರನ್ನು ಡ್ರೈವ್ ಮಾಡುತ್ತಾ ಸೆಲ್ಫೀ ತೆಗೆದುಕೊಳ್ಳಲು ಹೋಗಿ ಮಹಿಳೆ ಒಬ್ಬರು ಲಾರಿಗೆ ಗುದ್ದಿ ಬೆಂಕಿಯಲ್ಲಿ ಬೆಂದು ಹೋದ ದುರಂತ ಘಟನೆ 2014ರಲ್ಲಿ ನಡೆಯಿತು. ಆ ವರ್ಷ ಅಮೆರಿಕಾ ಒಂದರಲ್ಲೇ ಚಲಿಸುವ ವಾಹನಗಳಲ್ಲಿ ಫೋನ್ ಬಳಕೆಯಲ್ಲಿ ತೊಡಗಿ 33,000 ಜನರು ಒಂದಿಲ್ಲೊಂದು ರೀತಿಯ ಅವಘಡಗಳಿಗೆ ಒಳಪಟ್ಟರು. 2014 ಅನ್ನು 'ಸೆಲ್ಫೀಗಳ ದುರಂತದ ವರ್ಷ'ವೆಂದು ಕರೆಯಲಾಗಿದೆ. ಭಾರತದಲ್ಲಿ 2014 ರಲ್ಲಿ ಒಟ್ಟು 19 ಜನ ಸೆಲ್ಫೀ ಕಾರಣಗಳಿಂದ ಮೃತ ಪಟ್ಟಿದ್ದಾರೆ.

2015ರಲ್ಲಿ ಪ್ರಪಂಚದ 27 ಜನ ಸೆಲ್ಫೀಗಳ ಭರದಲ್ಲಿ ಜೀವ ಕಳೆದುಕೊಂಡಿದ್ದಾರೆ. ಗಮನಿಸಬೇಕಾದ ವಿಚಾರವೆಂದರೆ ಇದರಲ್ಲಿ ಅರ್ಧಕ್ಕಿಂತ ಹೆಚ್ಚು ಮರಣ ಸಂಭವಿಸಿದ್ದು ಭಾರತದಲ್ಲಿ! 2014 ರಿಂದ 2016ರ ಆಗಸ್ಟ್ ವರೆಗಿನ ಹಲವು ವರದಿಗಳ ಪ್ರಕಾರ ಭಾರತದಲ್ಲಿ 54 ಮಂದಿ ಸೆಲ್ಫೀಗಳನ್ನು ತೆಗೆದುಕೊಳ್ಳುವ ಪ್ರಯತ್ನಗಳಲ್ಲಿ ಮೃತ ಪಟ್ಟಿದ್ದಾರೆ!

ಕಳೆದ ಮೂರು ವರ್ಷಗಳಲ್ಲಿ ಸೆಲ್ಫೀ ಕಡ್ಡಿಗಳು ಖರ್ಚಾದಂತೆ ಇನ್ನೊಂದು ಸಾಧನ ಮಾರಾಟವಾದದ್ದಿಲ್ಲ. ಈ ಕಡ್ಡಿಗಳನ್ನು ಜಗತ್ತಿನ ಹಲವು ಮ್ಯೂಸಿಯಂ, ಆರ್ಟ್ ಗ್ಯಾಲರಿಗಳು, ಡಿಸ್ನೀ ಪಾರ್ಕುಗಳು, ಹಲವು ದುರ್ಗಮ ಪ್ರದೇಶಗಳ ಪ್ರವಾಸ ತಾಣಗಳಲ್ಲಿ ನಿಷೇಧಿಸಲಾಗಿದೆ. ಸೆಲ್ಫೀಗಳ ಜೊತೆ ಸೆಲ್ಫೀ ಕಡ್ಡಿಗಳು ಇನ್ನಷ್ಟು ಅಪಾಯಗಳನ್ನು ತಂದಿರುವುದೇ ಇದಕ್ಕೆ ಕಾರಣ. ಕ್ಯಾಮರಾದ ಮುಂದೆ ನಿಂತು ಮೈ ಮರೆತು ವರ್ತಿಸುವ ಜನರು ಹಲವು ರೀತಿ ಇತರರಿಗೆ ಕಿರಿ ಕಿರಿ ಉಂಟುಮಾಡಿರುವುದೂ ಇದಕ್ಕೆ ಕಾರಣ. ಸೆಲ್ಫಿ ನಾರ್ಸಿಸಂ ನ ಜೊತೆ ನೋಡುವ ಜನ ಇದನ್ನು ನಾರ್ಸಿ ಸ್ಟಿಕ್ ಎಂದೂ ಕರೆದಿದ್ದಾರೆ!

## ಸೆಲ್ಫೀಗಳ ವೈವಿಧ್ಯ ಮತ್ತು ಲಾಭ

ಈ ಸೆಲ್ಫೀಗಳ ಕೆಲ ಮೌಢ್ಯಗಳನ್ನು ತೊಡೆಯಲೆಂದೇ ಮೇಕಪ್ ಇಲ್ಲದ ಸೆಲ್ಫೀಗಳಿಗೆ ಕೆಲವರು ಕರೆಕೊಟ್ಟಿದ್ದಾರೆ. ಸಂಕೋಚಗಳಿಂದ ನರಳುವ ಜನರ, ಅದರಲ್ಲೂ ಯುವಜನರ ಹಿಂಜರಿಕೆ, ಸಂಕೋಚಗಳನ್ನು ಒರೆಸಿ ಬಿಸಾಕುವ ಯೋಜನೆಯಿದು.

ತಾವೂ ಜಗತ್ತಿನ ಹಲವರರಂತೆ ಅನ್ನುವ ಭರವಸೆ ಹಲವರಿಗೆ ಸಹಜವಾದ ಮಾನಸಿಕ ಅಗತ್ಯ ಕೂಡ! ಇದರಲ್ಲಿ ಯುವಜನತೆಯ ಮಾನಸಿಕ ಆರೋಗ್ಯದ ಲಾಭವೂ ಇದೆ. ಮಾನವನಿಗೆ ಆರಂಭಿಕ ಕಾಲದಿಂದಲೂ ಸಾಮಾಜಿಕ ಗುಂಪು ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಸಹಜ ಒಲೈಕೆಯಿದೆ. ಇದನ್ನು ಸಾಮಾಜಿಕ ತಾಣಗಳ ಚಟುವಟಿಕೆಗಳು ಈಗ ಹೊಸ ರೀತಿಯಲ್ಲಿ ಪೂರೈಸುತ್ತಿವೆ.

ರಕ್ತದಾನ ಶಿಬಿರವಿರಬಹುದು, ಒಂದು ಅಮಾಯಕ ಪ್ರಾಣಿಯನ್ನು ರಕ್ಷಿಸಿದ ಘಟನೆಯಿರಬಹುದು,ಒಂದು ಜಗಳವನ್ನು ಬಿಡಿಸಿದ್ದು ಇರಬಹುದು, ಅಥವಾ ಬದಲಾವಣೆಗೆ ಕರೆಕೊಟ್ಟ ಯಾವುದೇ ಚಳುವಳಿ ಇರಬಹುದು– ಒಟ್ಟಿನಲ್ಲಿ ಈ ಗುಂಪು ಚಟುವಟಿಕೆಯ ಸೆಲ್ಫೀಗಳು ಜನರನ್ನು ತಮ್ಮದೇ ಸಣ್ಣ ಗುಂಪಿನಲ್ಲಿ ಹೀರೋ ವನ್ನಾಗಿ ಮಾಡುತ್ತವೆ. ಗುರುತಿಸಲ್ಪಡುವ ಆಸೆ ಆತನ ಉತ್ತಮ ಚಟುವಟಿಕೆಗಳಿಗೆ ಕಾರಣವಾಗಬಲ್ಲದು. ಇದು ವೈಯಕ್ತಿಕವಾಗಿ ಮತ್ತು ಸಾಮಾಜಿಕವಾಗಿ ಲಾಭದಾಯಕ.

ನಾಚಿಕೆಯಿಂದ, ದುಗುಡಗಳಿಂದ, ಸಂಕೋಚಗಳಿಂದ ಭಾರವಾಗಿದ್ದ ಯುವಜನತೆ ಸೆಲ್ಫೀಗಳ ಮೂಲಕ ಖಾಲಿ ಕ್ಯಾನ್ವಾಸಿನ ತುಂಬ ತಮ್ಮ ಬದುಕಿನ ಚಿತ್ರಗಳನ್ನು ಬರೀ ಕ್ಲಿಕ್ಕಿಸಿಕೊಳ್ಳುತ್ತಿಲ್ಲ, ಬದಲಾಗಿ ಜಗತ್ತಿನ ಎಲ್ಲ ಮೂಲೆಗಳಿಗೆ ಅವನ್ನು ಸ್ವತ ತಾವೇ ಪೋಸ್ಟ್ ಮಾಡಿಕೊಳ್ಳುತ್ತಿದ್ದಾರೆ! ಹಾಗಾದರೆ ಅವರ ಸಂಕೋಚಗಳೆಲ್ಲ ಪಲಾಯನಗೈದವೇ? ಅಥವಾ ಅವರ ಈ ಯೌವನದ ಕಾಲದ ದುಗುಡಗಳು ಸೆಲ್ಫೀಗಳ ಮೂಲಕ ಬಿಡುಗಡೆ ಹೊಂದಿ ಪ್ರಪಂಚ ಪರ್ಯಟನೆಗೆ ಹೊರಟವೇ?

ಹರೆಯದ ಜಂಜಾಟಗಳಿಗೆ ಸಾಮಾಜಿಕ ತಾಣಗಳು ಒಂದು ರೀತಿಯಲ್ಲಿ ಸಹಾಯಕವಾಗಿವೆ. ಸಾಮಾಜಿಕ ತಾಣಗಳಿರುವುದು ಜನರನ್ನು ಒಂದುಗೂಡಿಸಲು. ಸೆಲ್ಫೀಗಳು ಈ ಸಾಮಾಜಿಕ ತಾಣಗಳಿಗೆ ದೃಶ್ಯ ಮಾಧ್ಯಮವನ್ನು ಕಲ್ಪಿಸುತ್ತಿವೆ.